ಇಂಥ ಸಂವಾದಗಳ ಹಿಂದೆ ಲೋಕಾನುಭವಗಳ ವಿಸ್ತಾರವೂ ಇರುತ್ತದೆ; ವಿಚಾರದ ಜೊತೆಯಲ್ಲೇ ಭಾವನೆಯೂ ಇರುತ್ತದೆ. ಓಲೈಕೆ, ಒಲಿಸುವಿಕೆ, ವಿರೋಧಿಸುವಿಕೆ ಎಲ್ಲವನ್ನೂ ನಿಜವಾದ ಸಂವಾದವು ಮಾಡಬೇಕಾಗುತ್ತದೆ. ಇನ್ನೊಬ್ಬರ ಬಗ್ಗೆ ಪ್ರೀತಿ–ಗೌರವಗಳು ಇಲ್ಲದೆ ಸಂವಾದ ಸಾಧ್ಯವಿಲ್ಲ. ನಮ್ಮನ್ನು ವಿರೋಧಿಸುವವರ ಜಾಗದಲ್ಲಿ ನಿಂತು ಯೋಚನೆ ಮಾಡುವುದು ನಮಗೆ ಸಾಧ್ಯವಾಗಬೇಕು ಮತ್ತು ಸಹಿಷ್ಣುತೆಯ ಮಾತನಾಡುತ್ತ ಅಸಹಿಷ್ಣುವಾಗಿರುವ ನಮ್ಮ ಕಾಲದ ಸಂವಾದಗಳಲ್ಲಿ ಈ ಎಲ್ಲ ಅಂಶಗಳು ಕಾಣೆಯಾಗಿರುವುದರ ಸೂಚನೆಯನ್ನು ಮಳಗಿಯವರ ಕೃತಿಯು ನೀಡುತ್ತ ಸಾಗುತ್ತದೆ. ಸಮುದಾಯಗಳ ಬದುಕಿನಲ್ಲಿ 'ಮೌನ'ಕ್ಕಿಂತ 'ಮಾತು' ಮುಖ್ಯವೆನ್ನುವುದು ನಿಜವಾದರೂ ಹಾಗೆ ಮಾತನಾಡುವವರು ನೈತಿಕತೆ, ಸಂಯಮ, ನಿರುದ್ವಿಗ್ನತೆಗಳನ್ನು ಕಳೆದುಕೊಂಡರೆ ಮಾತು ಅಪಾಯಕಾರಿಯಾಗುತ್ತದೆ, ಅರಳಿಸುವುದರ ಬದಲು ಕೆರಳಿಸುತ್ತದೆ ಎಂಬ ಎಚ್ಚರಿಕೆಯು ಇಲ್ಲಿನ ಸಂವಾದದ ಒಡಲೊಳಗಿದೆ.

ಕೃತಿಯ ನಾಲ್ಕು ಮುಖ್ಯ ಸಂವಾದಗಳ ಒಂದು ತುದಿಯಲ್ಲಿ ಗಾಂಧೀಜಿ ಇರುವುದು ಆಕಸ್ಮಿಕವಲ್ಲ. ಪ್ರತಿಯೊಂದು ಸಂವಾದದಲ್ಲೂ ಅವರು ವಿಭಿನ್ನವಾದ ತಂತ್ರಗಳನ್ನು ಉಪಯೋಗಿಸುವುದು ಕುತೂಹಲಕಾರಿಯೂ, ಅಧ್ಯಯನಯೋಗ್ಯ ವಿಷಯವೂ ಆಗಿದೆ. ಜನನಾಯಕರಾಗಿದ್ದ ಗಾಂಧೀಜಿ ಭಾವನಾತ್ಮಕವಾದ ಒತ್ತಡಗಳನ್ನು ತರುತ್ತಿದ್ದರು ಎನ್ನುವುದೂ ನಿಜ. ಹಾಗೆಂದೇ, 'ಉಪವಾಸ ಸತ್ಯಾಗ್ರಹ'ವನ್ನು ಸಂವಾದದ ಹಾದಿಯಾಗಿಸುವ ಮೂಲಕ ನಮ್ಮ 'ಸಂವಾದ'ದ ಪರಿಕಲ್ಪನೆಯನ್ನೂ ಗಾಂಧೀಜಿ ಮಗುಚಿ ಹಾಕಿದ್ದು ಸುಳ್ಳಲ್ಲ. ಅವರ ಎಲ್ಲ ಪ್ರಯತ್ನಗಳ ಹಿಂದೆ 'ಮನುಷ್ಯಪ್ರಾಣಿ'ಯನ್ನು ಸಂಘಜೀವನಕ್ಕೆ ಅಣಿಗೊಳಿಸುವ ಯತ್ನ ನಿರಂತರವಾಗಿತ್ತು. ಮನೆತುಂಬಿರುವ ಕಸವನ್ನು ಪ್ರತಿದಿನವೂ ಗುಡಿಸುವಂತೆ, ನಮ್ಮ ಮನಸ್ಸಿನ ಕಸವನ್ನೂ ಒರೆಸಿ ಶುಚಿಯಾಗಿಟ್ಟುಕೊಳ್ಳುವುದು ನಮ್ಮದೇ ಕೆಲಸ. ಈ 'ಶುಚಿ' ಎನ್ನುವುದರ ಮಾನದಂಡಗಳೂ ಹೊರಗಿನಿಂದ ಹೇರಲ್ಪಟ್ಟವಲ್ಲ. ಅವು ನಮ್ಮ ಒಳಗಿನಿಂದಲೇ ಮೂಡುವ ತಿಳಿವಳಿಕೆ. ಹಮ್ಮು–ಬಿಮ್ಮುಗಳಿಲ್ಲದ, ಸಾಮಾಜಿಕ ನಿಯಂತ್ರಣಗಳಿಗೆ ಕಟ್ಟುಬೀಳದ ನಿರಂತರ ಸಂವಾದವೇ ಜೀವನದ ತಿರುಳು ಎಂಬ ಅರಿವು ಗಾಂಧೀಜಿ ಬಳಸಿದ ಎಲ್ಲ ತಂತ್ರಗಳ ಹಿನ್ನೆಲೆಯಲ್ಲಿ ಇದೆ.

ಜಗತ್ತಿನ ಎಲ್ಲ ಸಂವಾದದ ಮೂಲರೂಪಕ ದಕ್ಷಿಣಾಮೂರ್ತಿಯದ್ದು. ಬದುಕಿಡೀ ಸೂಕ್ತ ಗುರುವಿಗಾಗಿ ಹುಡುಕಿ ಮುದುಕರಾಗಿರುವ ಬ್ರಹ್ಮನ ನಾಲ್ವರು ಮಾನಸಪುತ್ರರು ಕಟ್ಟಕಡೆಗೆ ಕೈಲಾಸಪರ್ವತದ ಶಿವನಲ್ಲಿ ಗುರುವನ್ನು ಕಾಣುತ್ತಾರೆ. ಆಲದಮರದ ಬುಡದಲ್ಲಿ ಕುಳಿತು ಅವರಿಗೆಲ್ಲ ಶಿವನು ಮೌನದ ಮೂಲಕ ಜ್ಞಾನವನ್ನು ಬೋಧಿಸುತ್ತಾನೆ. ಇವರನ್ನೇ ನಾಲ್ಕು ವೇದಗಳು ಎನ್ನಲಾಗುತ್ತದೆ. ಶಿಷ್ಯರ ಪ್ರಶ್ನೆಗೆ ಗುರುವಿನ ಮೌನವೇ ಉತ್ತರ. ಆ ಮೌನವ್ಯಾಖ್ಯಾನದಿಂದಲೇ ಶಿಷ್ಯರ ಸಂಶಯಗಳೆಲ್ಲ ಪರಿಹಾರವಾಗುತ್ತವೆ. ಗುರುವಿನ ಮೌನವು ಶಿಷ್ಯರ ಮನಸ್ಸಿನಲ್ಲಿ ಹುಟ್ಟಿಸುವ ಮಾತುಗಳ ಮಂಥನದಿಂದಲೇ ಸತ್ಯದ ಹೊಳಹು ಸಿಗುತ್ತದೆ; ನಿಜವಾದ ಉತ್ತರಗಳು ನಮ್ಮೊಳಗೇ ಅಡಗಿರುತ್ತವೆ. ಅಂತರಂಗದ ದನಿಗಳನ್ನು ಕೇಳಿಸಿಕೊಳ್ಳಬಲ್ಲ ಇಂಥ ಸಂವಾದವು ಪರಸ್ಪರ ಪ್ರೀತಿ–ಗೌರವಗಳಿರುವವರ ನಡುವೆ ಮಾತ್ರ ನಡೆಯಬಲ್ಲವು ಎಂಬುದನ್ನು ಹೊಳೆಯಿಸುವ ಪ್ರತೀಕವೇ ದಕ್ಷಿಣಾಮೂರ್ತಿ.

ಪ್ರತಿಯೊಂದು ಕಾಲಘಟ್ಟವೂ ತನ್ನದೇ ಬಗೆಯಲ್ಲಿ ಸೂಕ್ಷ್ಮವೂ, ಸಂದಿಗ್ಧವೂ ಆಗಿರುತ್ತದೆ. ಯಾವುದೇ ಕಾಲಘಟ್ಟದಲ್ಲಿಯೂ ಮಾತಿಗೆ ಅರ್ಥ ಒದಗುವುದು ಮೌನದಲ್ಲಿ ನಮ್ಮೊಳಗೆ ನಡೆಯುವ ಸಂವಾದದಲ್ಲಿಯೇ ಎಂಬ ಸತ್ಯವನ್ನು ಸಾಂಕೇತಿಕವಾಗಿ ಸೂಚಿಸುವ ದಕ್ಷಿಣಾಮೂರ್ತಿ ಪ್ರತಿಮೆಯ ಮೂಲಕ ಕೇಶವ ಮಳಗಿಯವರು ಆರಂಭಿಸಿರುವ 'ಮಾತುಕತೆ'ಯನ್ನು ಮುಂದುವರೆಸುವ ಪ್ರಯತ್ನ... ❖